THE NEW INDIAN EXPRESS

**Dtd- Thursday, 18th, October- 2018**

Page No.03

# Ultra modern critical care unit at R L Jalappa Hospital



Dr A V M Kutty, registrar, SDIAHER, J Rajendra, director, and doctors of R L Jalappa Hospital and Research Centre at the modern critical care centre | EXPRESS

EXPRESS NEWS SERVICE @ Kolar

SRI Devaraj Urs Academy of Higher Education and Research (SDIAHER) has constructed a state-of-the-art ultra modern critical care centre with modern facilities at R L Jalappa Hospital and Research Centre by spending Rs 45 crore, said secretary of the college G H Nagaraj. Speaking to press persons, he said it will be inaugurated by Minister D K Shiva Kumar on Friday.

R L Jalappa, chairman of SDUET and former union minister, S Kumar, chancellor of SDUAHER, will preside over the function in which District Minister Krishna Byre Gowda, MP K H Muniyappa and MLA Srinivas Gowda will participate.

Nagaraj said the centre has an operation theatre complex with 12 operation theatres, intensive care unit with 35 beds, the Department of Nephrology with 16 dialysis units and Department of Gastroenterology with two suites.

The eminent medical specialists, Dr Julius Punnen, senior consultant (cardiac surgery) and Dr Sunil Karanth, senior consultant and Intensivist, Manipal Hospital, Dr Umesh Jalihal, senior gastroenterologist, Columbia Asia Hospital, and Dr S Sundar, senior nephrologist, Manipal Hospital, will be the guests of honour and will inaugurate their respective specialty areas in the centre.

Nagaraj said the facilities with modern medical equipment are housed in a built up area of 72,646 sq ft.

At a press meet, J Rajendra, director (administration and finance), Rajesh N Jagadale, vice-chairman of Sri Devaraj Urs Educational Trust for Backward Classes, Dr A V M Kutty, registrar and in-charge V-C, Dr M L Harendra Kumar, dean, SDUAHER and principal, SDUMC and Dr V Lakshmaiah, director (medical services) and medical superintendent, RLJH and RC were present.

**ಸುಸಜ್ಜಿತ 12ಶಸ್ತ್ರಚಿಕಿತ್ಸಾ ಕೊಠಡಿಗಳು:**

ಆಸ್ಪತ್ರೆ ಆವರಣದಲ್ಲಿ 72,646 ಚದರ ಅಡಿ ವಿಸ್ತೀರ್ಣದಲ್ಲಿ 30 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಿರುವ ನೂತನ ಕಟ್ಟಡದಲ್ಲಿ 15 ಕೋಟಿ ಮೌಲ್ಯದ ಅಲ್ಟ್ರಾ-ಆಧುನಿಕ ಮಾಡ್ಯುಲರ್, ಸುಸಜ್ಜಿತ ಶಸ್ತ್ರಚಿಕಿತ್ಸಾ ಸಲಕರಣೆಗಳು, 36 ಹಾಸಿಗೆಗಳುಳ್ಳ ತೀವ್ರ ನಿಗಾ ಘಟಕ, 18 ಹಾಸಿಗೆಗಳುಳ್ಳ ಡಯಾಲಿಸಿಸ್ ಘಟಕ, ಮೂತ್ರಪಿಂಡ ಶಾಸ್ತ್ರ ವಿಭಾಗ, ಸುಸಜ್ಜಿತ ಎಂಡೋಸ್ಕೋಪಿ ಯುನಿಟ್, ಗ್ಯಾಸ್ಟ್ರೋಎಂಟರಾಲಜಿ ವಿಭಾಗಗಳು ಲೋಕಾರ್ಪಣೆಗೊಳ್ಳಲಿವೆ.

ಅತ್ಯಾಧುನಿಕ ಸೌಲಭ್ಯಗಳ ಈ ಶಸ್ತ್ರಚಿಕಿತ್ಸಾ ಕೊಠಡಿಗಳಲ್ಲಿ ಕಾರ್ಯನಿರ್ವಹಿಸಲು ತಜ್ಞರು, ಸಿಬ್ಬಂದಿಗೆ ಈಗಾಗಲೇ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ವೈದ್ಯಕೀಯ ಕಾಲೇಜಿನ ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ, ಹಣಕಾಸಿನ ನಿರ್ದೇಶಕರಾದ ಜೆ.ರಾಜೇಂದ್ರ, ಕುಲಸಚಿವ ಎವಿಎಂ.ಕುಟ್ಟಿ, ಪ್ರಾಂಶುಪಾಲ ಹರೇಂದ್ರಕುಮಾರ್, ವೈದ್ಯಕೀಯ ಅಧೀಕ್ಷಕ ಲಕ್ಷ್ಮಯ್ಯ, ಖ್ಯಾತ ವೈದ್ಯರಾದ ಡಾ.ಜ್ಯೂಲಿಯಸ್ ಪುನೆನ್,

# ಜಾಲಪ್ಪ ಆಸ್ಪತ್ರೆಗೆ ತೀವ್ರ ನಿಗಾಘಟಕ, ಶಸ್ತ್ರಚಿಕಿತ್ಸಾ ಕೊಠಡಿ ಸೇರ್ಪಡೆ



ಕೋಲಾರ ಅ ೧೬

ನಗರದ ಹೊರವಲಯದ ಟಮಕದ ಆರ್.ಎಲ್. ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಇದೇ ೧೯ರಂದು ಜಾಲಪ್ಪನವರ ಹುಟ್ಟುಹಬ್ಬದ ಸಂದರ್ಭದಲ್ಲಿ ತೀವ್ರ ನಿಗಾ ಘಟಕ, ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ರೋಗಿಗಳ ಸೇವೆಗಾಗಿ ಸಮರ್ಪಿಸಲಾಗುತ್ತಿದೆ.

ದೇವರಾಜ ಅರಸು ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್. ನಾಗರಾಜ್ ಪತ್ರಕರ್ತರಿಗೆ ಈ ಮಾಹಿತಿಯನ್ನು ನೀಡಿ ಮಾಜಿ ಸಂಸದ ಜಾಲಪ್ಪ ಹುಟ್ಟುಹಬ್ಬವನ್ನು ಜಾಲಪ್ಪ ಆಸ್ಪತ್ರೆ ದಿನವನ್ನಾಗಿ ಆಚರಿಸುತ್ತಿದ್ದು ಈ ಬಾರಿಯ ಕಾರ್ಯಕ್ರಮದಲ್ಲಿ ಜಾಲಪ್ಪ ಅವರೊಡನೆ ದೇವರಾಜ ಅರಸು ವೈದ್ಯಕೀಯ ವಿ.ವಿ. ಕುಲಾಧಿಪತಿ ಡಾ॥ ಎಸ್. ಕುಮಾರ್, ಸಚಿವರಾದ ಡಿ.ಕೆ. ಶಿವಕುಮಾರ್, ಕೃಷ್ಣಬೈರೇಗೌಡ, ಸಂಸದ ಕೆ.ಎಚ್. ಮುನಿಯಪ್ಪ, ಶಾಸಕ ಕೆ.ಶ್ರೀನಿವಾಸಗೌಡ ಭಾಗವಹಿಸುವರು ಎಂದು ಅವರು ವಿವರಿಸಿದರು.

ವಿಜಂಯದಶಮಿ ದಿನದಂದು ಬೆಳಿಗ್ಗೆ ೧೦ ಘಂಟೆಗೆ ಜಾಲಪ್ಪ ಆಸ್ಪತ್ರೆ ದಿನಾಚರಣೆ ನಡೆಯಲಿದ್ದು ಮಧ್ಯಾಹ್ನ ೨.೩೦ ಘಂಟೆಗೆ ೪೫ ಕೋಟಿ ರೂ. ವೆಚ್ಚದ ಕಟ್ಟಡ,ಉಪಕರಣಗಳ ಲೋಕಾರ್ಪಣೆ ಕಾರ್ಯಕ್ರಮ ಜರುಗಲಿದೆ ಎಂದರು.

ಆಸ್ಪತ್ರೆ ಆವರಣದಲ್ಲಿ ೭೨,೬೪೬ ಚದರ ಅಡಿ ವಿಸ್ತೀರ್ಣದಲ್ಲಿ ೩೦ ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಕಟ್ಟಡದಲ್ಲಿ ೧೫ ಕೋಟಿ ರೂ. ಮೌಲ್ಯದ ಅಲ್ಟ್ರಾ-ಆಧುನಿಕ ಮಾಡ್ಯುಲರ್, ಸುಸಜ್ಜಿತ ಶಸ್ತ್ರ ಚಿಕಿತ್ಸಾ ಸಲಕರಣೆಗಳು, ೩೬ ಹಾಸಿಗೆಗಳಿರುವ ತೀವ್ರ ನಿಗಾ ಘಟಕ, ೧೮ ಹಾಸಿಗೆಗಳುಳ್ಳ ಡಯಾಲಿಸಿಸ್ ಘಟಕ, ಮೂತ್ರಪಿಂಡ ಶಾಸ್ತ್ರ ವಿಭಾಗ, ಸುಸಜ್ಜಿತ

ಕುಲಾಧಿಪತಿ ಡಾ॥ಎಸ್. ಕುಮಾರ್ ಮಾತನಾಡಿ ಕೇಂದ್ರ ಸರ್ಕಾರದ ಸಹಾಯಕ್ಕೆ ಕೋರಲಾಗಿದ್ದು, ನಾವು ಸ್ಥಳ ಸೌಲಭ್ಯ ನೀಡುತ್ತೇವೆ ನಮಗೆ ಆಧುನಿಕ ಉಪಕರಣಗಳಿಗೆ ಅಗತ್ಯ ಆರ್ಥಿಕ ನೆರವು ನೀಡಿದರೆ ಬಡ ಗ್ರಾಮೀಣ ರೋಗಿಗಳಿಗೆ ಇನ್ನಷ್ಟು ಉತ್ತಮ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆಂದರು.

ಜಿಲ್ಲೆಯಲ್ಲಿ ಕ್ಯಾನ್ಸರ್ ರೋಗಿಗಳು ಗಣನೀಯ ಪ್ರಮಾಣದಲ್ಲಿದ್ದು, ನಮ್ಮಲ್ಲೇ ೧೦೦ ರೋಗಿಗಳು ದಾಖಲಾಗಿದ್ದು, ಅವರಲ್ಲಿ ಶೇ.೭೦ರಷ್ಟು ಬಾಯಿ,ತಲೆ ಕ್ಯಾನ್ಸರ್ ಪೀಡಿತರು, ಆಸ್ಪತ್ರೆಯಲ್ಲಿ ಕ್ಯಾನ್ಸರ್ ಯುನಿಟ್ ತೆರೆಯಲು ಬದ್ಧತೆ ಹೊಂದಿರುವುದಾಗಿ ತಿಳಿಸಿದರು.

ಸಂಸ್ಥೆಯ ಆರ್ಥಿಕ ವಿಭಾಗದ ನಿರ್ದೇಶಕ ಜಿ. ರಾಜೇಂದ್ರ ಮಾತನಾಡಿ ಆಧುನಿಕ ಶಸ್ತ್ರ ಚಿಕಿತ್ಸಾ ಕೇಂದ್ರದಲ್ಲಿ ಹಿಂದಿನಂತೆ ಶುಲ್ಕವಿರಲಿದೆ. ಡಯಾಲಿಸಿಸ್‌ಗೆ ಶೇ.೫೦ರಷ್ಟು ಶುಲ್ಕ ಏರಿಸಲಾಗಿದೆ, ರೋಗಿಗಳಿಗೆ ಆಸ್ಪತ್ರೆಯಲ್ಲಿ ಸಿಗುವ ಎಲ್ಲ ಉಚಿತ ಸೇವೆಗಳು ಹಾಗೆಯೇ ಮುಂದುವರೆಯಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಎ.ವಿ.ಎಂ.ಕುಟ್ಟಿ, ವೈದ್ಯಕೀಯ ಅಧೀಕ್ಷಕ ಡಾ.ಲಕ್ಷ್ಮಯ್ಯ, ಪ್ರಾಂಶುಪಾಲ ಡಾ.ಹರೇಂದ್ರ ಕುಮಾರ್, ಮುಖ್ಯ ಇಂಜಿನಿಯರ್ ಹನುಮಂತರಾಯ ಮೊದಲಾದವರು ಉಪಸ್ಥಿತರಿದ್ದರು.

ಕೋಲಾರಶಕ್ತಿ

# ಅ.19ರಂದು ತೀವ್ರ ನಿಗಾ ಘಟಕ, ಶಸ್ತ್ರಚಿಕಿತ್ಸಾ ಕೊಠಡಿ ಉದ್ಘಾಟನೆ ಹಾಗೂ ಮಾಜಿ ಸಂಸದ ಜಾಲಪ್ಪ ಅವರ ಹುಟ್ಟುಹಬ್ಬವನ್ನು ಜಾಲಪ್ಪ ಆಸ್ಪತ್ರೆ ದಿನಾಚರಣೆಯಾಗಿ ಆಚರಣೆ: ಜಿ.ಹೆಚ್.ನಾಗರಾಜ್

ಕೋಲಾರ,ಅ.16– ಅ.19 ರಂದು ತೀವ್ರ ನಿಗಾ ಘಟಕ, ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಉದ್ಘಾಟನೆ ಮಾಡುತ್ತಿರುವುದಾಗಿ ದೇವರಾಜ ಅರಸು ವೈದ್ಯಕೀಯ ವಿವಿ ಆಡಳಿತ ಮಂಡಳಿ ಕಾರ್ಯದರ್ಶಿ ಜಿ.ಹೆಚ್.ನಾಗರಾಜ್ ತಿಳಿಸಿದರು.

ನಗರದ ಅರಸು ವೈದ್ಯಕೀಯ ವಿವಿ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು.

ಮಾಜಿ ಸಂಸದ ಜಾಲಪ್ಪ ಅವರ ಹುಟ್ಟುಹಬ್ಬವನ್ನು ಜಾಲಪ್ಪ ಆಸ್ಪತ್ರೆ ದಿನಾಚರಣೆಯಾಗಿ ಆಚರಿಸುತ್ತಿದ್ದು, ಕಾರ್ಯಕ್ರಮದಲ್ಲಿ ಜಾಲಪ್ಪ ಅವರೊಂದಿಗೆ ರಾಜ್ಯ ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್, ವಿವಿ ಕುಲಾಧಿಪತಿ ಡಾ.ಎಸ್.ಕುಮಾರ್, ರಾಜ್ಯ ಗ್ರಾಮೀಣಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ, ಸಂಸದ ಕೆ.ಎಚ್.ಮುನಿಯಪ್ಪ, ಶಾಸಕ ಕೆ.ಶ್ರೀನಿವಾಸಗೌಡ ಭಾಗವಹಿಸುವರು ಎಂದು ತಿಳಿಸಿದರು.

ಅಂದು ಬೆಳಗ್ಗೆ 10, ಗಂಟೆಗೆ ಜಾಲಪ್ಪ ಹುಟ್ಟುಹಬ್ಬದ ಅಂಗವಾಗಿ ಆಸ್ಪತ್ರೆ ದಿನಾಚರಣೆ ನಡೆಯಲಿದುದ, ಮಧ್ಯಾಹ್ನ 2.30 ಗಂಟೆಗೆ 45 ಕೋಟಿ ವೆಚ್ಚದ ಕಟ್ಟಡ,ಉಪಕರಣಗಳ ಲೋಕಾರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.



ಡಾ.ಸುನಿಲ್ ಕಾರಂತ್,ಡಾ.ಉಮೇಶ್ ಜಲಿಹಾಲ್,ಡಾ.ಎಸ್.ಸುಂದರ್ ಮತ್ತಿತರರು ಭಾಗವಹಿಸುವರು ಎಂದರು.

ಕುಲಾಧಿಪತಿ ಡಾ.ಎಸ್. ಕುಮಾರ್, ಕೇಂದ್ರ ಸರ್ಕಾರದ ಸಹಾಯಕ್ಕೆ ಕೋರಲಾಗಿದ್ದು, ನಾವು ಸ್ಥಳ ಸೌಲಭ್ಯಗಳನ್ನು ನೀಡುತ್ತೇವೆ ನಮಗೆ ಆಧುನಿಕ ಉಪಕರಣಗಳಿಗೆ ಅಗತ್ಯ ಆರ್ಥಿಕ ನೆರವು ನೀಡಿದರೆ ಬಡ ರೋಗಿಗಳಿಗೆ ಮತ್ತಷ್ಟು ಉತ್ತಮ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ ಎಂದರು.

ನಾವು ವಿದ್ಯುತ್, ಕಟ್ಟಡ ಮತ್ತಿತರ ಎಲ್ಲ ಸೌಲಭ್ಯ ಒದಗಿಸಲಿದ್ದು, ಸಹಾಯ ಸಿಕ್ಕರೆ ಮತ್ತಷ್ಟು ಆಧುನಿಕ ಯಂತ್ರಗಳು ಗ್ರಾಮೀಣ ರೋಗಿಗಳಿಗೆ ಸಿಗಲಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಕ್ಯಾನ್ಸರ್ ರೋಗಿಗಳು ಇದ್ದು, ನಮ್ಮಲ್ಲೇ 100 ರೋಗಿಗಳು ದಾಖಲಾಗಿದ್ದು, ಅದರಲ್ಲಿ ಶೇ.70 ರಷ್ಟು ಬಾಯಿ,ತಲೆ ಕ್ಯಾನ್ಸರ್ ಪೀಡಿತರಾಗಿದ್ದಾರೆ, ಆಸ್ಪತ್ರೆಯಲ್ಲಿ ಕ್ಯಾನ್ಸರ್ ಯುನಿಟ್ ತೆರೆಯಲು ಬದ್ಧತೆ ಹೊಂದಿರುವುದಾಗಿ ತಿಳಿಸಿದರು.

ಸಂಸ್ಥೆಯ ಆರ್ಥಿಕ ವಿಭಾಗದ ನಿರ್ದೇಶಕ ಹಾಗೂ ಜಾಲಪ್ಪ ಪುತ್ರ ರಾಜೇಂದ್ರ, ಆಧುನಿಕವಾಗಿ ನಿರ್ಮಿಸಿರುವ ಶಸ್ತ್ರಚಿಕಿತ್ಸಾ ಕೇಂದ್ರದಲ್ಲಿ ಹಿಂದಿನಂತೆ ಶುಲ್ಕವಿದ್ದು, ಯಾವುದೇ ಹೆಚ್ಚುವರಿ ಮಾಡಿಲ್ಲ ಎಂದರು.

ಡಯಾಲಿಸಿಸ್‌ಗೆ ಶೇ.5 ರಷ್ಟು ಶುಲ್ಕ ಏರಿಸಲಾಗಿದೆ, ರೋಗಿಗಳಿಗೆ ಆಸ್ಪತ್ರೆಯಲ್ಲಿ ಸಿಗುವ ಎಲ್ಲಾ ಉಚಿತ ಸೇವೆಗಳು ಹಾಗೆಯೇ ಮುಂದುವರೆಯಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಎ.ವಿ.ಎಂ.ಕುಟ್ಟಿ, ವೈದ್ಯಕೀಯ ಅಧೀಕ್ಷಕ ಡಾ.ಲಕ್ಷ್ಮಯ್ಯ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಮುಖ್ಯ ಇಂಜಿಯಿಯರ್ ಹನುಮಂತರಾಯ ಮತ್ತಿತರರು ಉಪಸ್ಥಿತರಿದ್ದರು.

ಕೋಲಾರಶಕ್ತಿ



**ಸುಸಜ್ಜಿತ 12ಶಸ್ತ್ರಚಿಕಿತ್ಸಾ ಕೊಠಡಿಗಳು:**

ಆಸ್ಪತ್ರೆ ಆವರಣದಲ್ಲಿ 72,646 ಚದರ ಅಡಿ ವಿಸ್ತೀರ್ಣದಲ್ಲಿ 30 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಿರುವ ನೂತನ ಕಟ್ಟಡದಲ್ಲಿ 15 ಕೋಟಿ ಮೌಲ್ಯದ ಅಲ್ಟ್ರಾ-ಆಧುನಿಕ ಮಾಡ್ಯುಲರ್, ಸುಸಜ್ಜಿತ ಶಸ್ತ್ರಚಿಕಿತ್ಸಾ ಸಲಕರಣೆಗಳು, 36 ಹಾಸಿಗೆಗಳುಳ್ಳ ತೀವ್ರ ನಿಗಾ ಘಟಕ, 18 ಹಾಸಿಗೆಗಳುಳ್ಳ ಡಯಾಲಿಸಿಸ್ ಘಟಕ, ಮೂತ್ರಪಿಂಡ ಶಾಸ್ತ್ರ ವಿಭಾಗ, ಸುಸಜ್ಜಿತ ಎಂಡೋಸ್ಕೋಪಿ ಯುನಿಟ್, ಗ್ಯಾಸ್ಟ್ರೋಎಂಟರಾಲಜಿ ವಿಭಾಗಗಳು ಲೋಕಾರ್ಪಣೆಗೊಳ್ಳಲಿವೆ.

ಅತ್ಯಾಧುನಿಕ ಸೌಲಭ್ಯಗಳ ಈ ಶಸ್ತ್ರಚಿಕಿತ್ಸಾ ಕೊಠಡಿಗಳಲ್ಲಿ ಕಾರ್ಯ ನಿರ್ವಹಿಸಲು ತಜ್ಞರು, ಸಿಬ್ಬಂದಿಗೆ ಈಗಾಗಲೇ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ವೈದ್ಯಕೀಯ ಕಾಲೇಜಿನ ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ, ಹಣಕಾಸಿನ ನಿರ್ದೇಶಕರಾದ ಜೆ.ರಾಜೇಂದ್ರ, ಕುಲಸಚಿವ ಎವಿಎಂ.ಕುಟ್ಟಿ, ಪ್ರಾಂಶುಪಾಲ ಹರೇಂದ್ರಕುಮಾರ್, ವೈದ್ಯಕೀಯ ಅಧೀಕ್ಷಕ ಲಕ್ಷ್ಮಯ್ಯ, ಖ್ಯಾತ ವೈದ್ಯರಾದ ಡಾ.ಜ್ಯೂಲಿಯಸ್ ಪುನೆನ್,